ಕಾಶ್ಮೀರ: ಭೂಲೋಕ ಸ್ವರ್ಗ

ದಕ್ಷಿಣದವರು ಹೀಗೆ ಒಬ್ಬಳೇ ಬೋಲ್ಡ್ ಆಗಿ ಪ್ರಯಾಣಿಸಬಲ್ಲಿರಿ. ಆದರೆ ನಮ್ಮ ಹೆಣ್ಣುಮಕ್ಕಳಷ್ಟೇ ಅಲ್ಲ, ಹುಡುಗರನ್ನು ಕಳುಹಿಸುವಾಗಲೂ ಭಾರೀ ಯೋಚನೆ ಮಾಡುತ್ತೇವೆ. ಯಾಕೆಂದರೆ ಮನೆಯಿಂದ ಹೊರಟ ಮಕ್ಕಳು ಮರಳುತ್ತಾರೆ ಎಂಬ ನಂಬಿಕೆಯೇ ಇಲ್ಲ'.

'ಯಾಕೆ ಹಾಗೆ?'

'ಒಂದೋ ಭಯೋತ್ಪಾದಕರು ಹೊತ್ತುಕೊಂಡು ಹೋಗುತ್ತಾರೆ ಅಥವಾ ವಿಚಾರಣೆಗೆಂದು ಮಿಲಿಟರಿಯವರು ಕರೆದೊಯ್ಯುತ್ತಾರೆ. ವಾಪಸ್ ಬರದಿದ್ದರೆ ಕೇಳುವುದಾದರೂ ಯಾರ ಬಳಿ?'

ಅಶ್ಮುಗಾಂವ್ ಒಂದು ಸುಂದರ ಹಳ್ಳಿ. ಲಿಡ್ ಎಂಬ ನದಿ ದಂಡೆಯಲ್ಲಿರುವ ಬೆಟ್ಟಗಳ ಊರು. ಈ ನದಿ ಮುಂದೆ ಝೀಲಂ ಅನ್ನು ಸೇರುತ್ತದೆ. ಗುಡ್ಡಗಾಡು ಜನರೇ ತುಂಬಿರುವ ಆ ಊರಿನಲ್ಲಿ ಕೆಲವು ಕಾಶ್ಮೀರಿ ಪಂಡಿತ ಕುಟುಂಬಗಳು ಉಳಿದುಕೊಂಡಿದ್ದವು. ಪಂಡಿತ ಕುಟುಂಬದ ಪದವಿ ಪಡೆದ ಯುವಕನೊಬ್ಬ ಕಾಣೆಯಾಗಿ ಬಹಳ ದಿನಗಳಾಗಿದ್ದ ಬಗ್ಗೆ ಸ್ಥಳೀಯ ಇಂಗ್ಲಿಷ್ ಪತ್ರಿಕೆ ವರದಿ ಮಾಡಿತ್ತು. ಅಲ್ಲೊಂದು ಮಸೀದಿಯಲ್ಲಿ ಎಲ್ಲರೂ ಪ್ರಾರ್ಥನೆ ಸಲ್ಲಿಸಿದರು. ಅಂದು ಆ ಮಸೀದಿಯಲ್ಲಿ ಸಂತರೊಬ್ಬರ ಹೆಸರಿನಲ್ಲಿ ವಾರ್ಷಿಕ ಹಬ್ಬ. ಬೆಟ್ಟದ ಮೇಲಿಂದ ಕೊಳ್ಳಿಗಳನ್ನು ಹಿಡಿದು ಭಕ್ತರು ನಿಧಾನವಾಗಿ ಬೆಟ್ಟ ಇಳಿಯುವಾಗ ಸಾಲುದೀಪಗಳು ಮೆರವಣಿಗೆ ಹೊರಟಂತೆ ಕಾಣುತ್ತಿತ್ತು. ಬೆಟ್ಟದ ಕೆಳಭಾಗದಲ್ಲಿ ನಿಂತಿದ್ದ ನಾವೆಲ್ಲ ಆ ಸುಂದರ ದೃಶ್ಯವನ್ನು ಕಣ್ತುಂಬಿಕೊಂಡೆವು. ಬಶೀರ್ ಅತ್ಯಂತ ಉತ್ಸಾಹದಿಂದ ಕಾವ್ಯದ ಸಾಲುಗಳನ್ನು ಹೇಳುತ್ತ, ಚಪ್ಪಾಳೆ ತಟ್ಟುತ್ತ ಕೊಳ್ಳಿಹಿಡಿದು ಸಾಗುತ್ತಿದ್ದವರನ್ನು ಹುರಿದುಂಬಿಸುತ್ತಿದ್ದರು. ಸುಮಾರು ನಾಲ್ಕೈದು ಸಾವಿರ ಜನರು ಭಾಗವಹಿಸಿದ್ದ ಆ ಹಬ್ಬದಲ್ಲಿ ನಾನೊಬ್ಬಳೇ ಬಿಂದಿ ಧರಿಸಿದವಳಾಗಿದ್ದೆ. ಎಲ್ಲರೂ ನನ್ನತ್ತ ವಿಶೇಷ ಕುತೂಹಲದಿಂದ ನೋಡುತ್ತಿದ್ದರು. ಕೆಲವರು ಇಂಡಿಯಾ?' ಎಂದು ಕೇಳಿ ಹೋಗುತ್ತಿದ್ದರು.

ಶಬ್ನಂ ಕಯ್ಯೂಮ್ ಎಂದರೆ ಮಹಿಳೆಯಿರಬೇಕು ಎಂದುಕೊಂಡಿದ್ದೆ. ಆದರೆ ಚಿಕ್ಕ ಟೋಪಿ ಹಾಕಿಕೊಂಡ 60ರ ಆಸುಪಾಸಿನ ವ್ಯಕ್ತಿಯನ್ನು ಅಸ್ರಾರ್ ಎಂಬ ಹುಡುಗ ಪರಿಚಯಿಸಿದಾಗ ನನಗೆ ಆಶ್ಚರ್ಯವಾಯಿತು. ಅವರು ಟ್ಯಾಬ್ಲಾಯಿಡ್ ಒಂದರ ಸಂಪಾದಕರು. ಅಸ್ತವ್ಯಸ್ತ ಕಚೇರಿಯಲ್ಲಿ ಹತ್ತಾರು ಮಂದಿ ಸಿಬ್ಬಂದಿ. ರಾಶಿ ರಾಶಿ ಪುಸ್ತಕ, ಪತ್ರಿಕೆಗಳು.

ಕಾಶ್ಮೀರಕ್ಕೆ ಸ್ವಾತಂತ್ರ್ಯ ಸಿಗಲೇಬೇಕು ಎನ್ನುತ್ತ ದೀರ್ಘವಾಗಿ ಮಾತನಾಡಿದ ಅವರು – ಭಾರತ, ಕಾಶ್ಮೀರ ಮತ್ತು ಪಾಕಿಸ್ತಾನವನ್ನು ಪಾತ್ರಗಳನ್ನಾಗಿಸಿ ಕಾದಂಬರಿಯನ್ನೇ ಬರೆದಿರುವವರು. ಆ ಕಾದಂಬರಿ ಬ್ಲಾಕ್ ಮಾರ್ಕೆಟ್‌ನಲ್ಲಿಯೂ ಮಾರಾಟ ಕಂಡಿತ್ತು. ಭಾರತದ ನಡೆಯ ಬಗ್ಗೆ ಅವರಿಗೆ ತೀವ್ರ ಆಕ್ರೋಶ. ಅವರ ಕಚೇರಿಯನ್ನು ಸೈನಿಕರು, ಅಧಿಕಾರಿಗಳು ಅನೇಕ ಸಲ ಜಾಲಾಡಿದ್ದರು. ಅತ್ತ ಪ್ರತ್ಯೇಕತಾವಾದಿಗಳ ಜೊತೆಗಾಗಲೀ ಭಯೋತ್ಪಾದಕರ ಜೊತೆಗಾಗಲೀ ಅವರು ಒಳ್ಳೆಯ ಸಂಬಂಧ ಹೊಂದಿರಲಿಲ್ಲ. ಭಯೋತ್ಪಾದಕರು ಕಶ್ಮೀರಿತನ'ವನ್ನು ಹೇಗೆ ಪುಡಿಗಟ್ಟಿಬಿಟ್ಟರು. ನಿಮ್ಮ ಅರುಂಧತಿ ರಾಯ್ ಭಾಷಣ ಮಾಡಿದಷ್ಟು ಎಲ್ಲವೂ ಸುಲಭವಿಲ್ಲ ಎಂದೆಲ್ಲ ದಬಾಯಿಸಿದರು. ಏಕಾಂಗಿ ಹೋರಾಟದ ಮನುಷ್ಯ ಕಾಶ್ಮೀರವನ್ನು ಅದಮ್ಯವಾಗಿ ಪ್ರೀತಿಸುತ್ತಿದ್ದರು. ಇದೊಂದು ವಿಶೇಷ ಪ್ರದೇಶ ಎಂದು ಅಕ್ಕರೆಯಿಂದ ಹೇಳಿಕೊಳ್ಳುತ್ತಿದ್ದರು.

ನನಗೆ ಕಾಶ್ಮೀರಿ ಹುಡುಗಿಯರ ಸ್ನೇಹ ಮಾಡಿಕೊಳ್ಳಬೇಕು ಎನ್ನುವ ಆಸೆ. ರಿಹಾನಾ ಮತ್ತು ಆಕೆಯ ಸ್ನೇಹಿತೆಯರು ಹರಟೆಗೆ ಸಿಗುತ್ತಿದ್ದರು. ಈಗೀಗ ಅಲ್ಲಲ್ಲಿ ಬುರ್ಕಾ ಹಾಕಲು ಹೇಳುತ್ತಿರುವ ಬಗ್ಗೆ ಅವರೆಲ್ಲ ಬೇಸರದಿಂದ ಹೇಳುತ್ತಿದ್ದರು. ಅವರ ಹಾಡುಗಳ ಜೊತೆಗೆ, ಭಯೋತ್ಪಾದನೆಯಿಂದಾಗಿ ಮದುವೆಗೆ ಆಗಿರುವ ಕಷ್ಟಗಳು, ಸಂಪಾದನೆಯಿಲ್ಲದ ಕುಟುಂಬಗಳ ತಲ್ಲಣಗಳನ್ನು ಮಾತುಗಳ ಮೂಲಕ ಅರಿಯಬಹುದಿತ್ತು. ಬೇರೆ ಹುಡುಗಿಯರು ಸಿಗುತ್ತಲೇ ಇರಲಿಲ್ಲ. ಬಿಂದಿ ಇಟ್ಟ ಇಂಡಿಯಾದವಳ ಜೊತೆ ಒಂದು ಚಹಾ ಕುಡಿಯಲೂ ಅಳುಕುತ್ತಿದ್ದರು. 'ಚಂದದ ಕಾಶ್ಮೀರ ನೋಡಿಕೊಂಡು ಫೋಟೊ ತಕ್ಕೊಂಡು ಹೋಗಿಬಿಡಿ' ಎಂದು ಒಬ್ಬರು ಅಂಕಲ್ ಹೇಳಿದ್ದನ್ನು ಕೇಳಿಸಿಕೊಂಡಿದ್ದೂ ಆಯಿತು.

ಲೇಖಕಿ ನಸೀಮ್‌ಶೆಫಾಯಿ ಇದನ್ನೇ ಹೇಳಿದರು. 'ಇಲ್ಲಿ ಮಾತು ಬಹಳ ಸುಲಭವಿಲ್ಲ. ನಾಲ್ಕು ದಿನಗಳ ಭೇಟಿಗೆ ಇದೆಲ್ಲ ಚಂದ. ಮತ್ತಷ್ಟು ದಿನ ನೀವಿದ್ದರೆ ನಮ್ ಅವಸ್ಥೆ ಗೊತ್ತಾಗುತ್ತದೆ. ಈಗೆಲ್ಲ ಕಣ್ಣನ್ನೂ ಮುಚ್ಚುವ ಬುರ್ಕಾ ಹಾಕಬೇಕೆಂದು ಒತ್ತಾಯಿಸುತ್ತಾರೆ. ನಮಗಂತೂ ಅದೆಲ್ಲ ಅಭ್ಯಾಸವೇ ಇಲ್ಲ. ಅತ್ತ ಭಾರತವೂ ಸೇನೆಯನ್ನೇ ನಂಬಿ ಕಾಶ್ಮೀರವನ್ನು ನಿಯಂತ್ರಿಸಬಯಸುತ್ತದೆ. ಇತ್ತ ಭಯೋತ್ಪಾದಕರು ಗನ್ನು ತೋರಿಸಿ ತಮ್ಮ ಅಜೆಂಡಾ ನಮ್ಮ ಮೇಲೆ ಹೇರುತ್ತಿದ್ದಾರೆ' ಎಂದು ಬೇಸರದ ಮಾತಾಡಿದರು. ಆಕೆಯ ಪತಿ ಪತ್ರಿಕೆಯೊಂದರ ಸಂಪಾದಕರು. ಅನೇಕ ಬಾರಿ ದಾಳಿಗಳನ್ನು ಎದುರಿಸಿದವರು. ಅವರ ಮನೆಗೆ ಕಾವಲಿನ ವ್ಯವಸ್ಥೆಯಿತ್ತು.

ಕಾಶ್ಮೀರಕ್ಕೆ ಜ್ಞಾನಪೀಠ ಪ್ರಶಸ್ತಿ ತಂದುಕೊಂಡ ರೆಹಮಾನ್ ರಾಹಿ ಕೂಡ ತಮ್ಮ ಹೆಣ್ಣುಮಕ್ಕಳಿಗೆ ಎದುರಾದ ಬೆದರಿಕೆಗಳ ಬಗ್ಗೆ ಹೇಳಿಕೊಂಡರು. ಆಸಿಡ್ ಹಾಕುವ ಬೆದರಿಕೆಯ ನಡುವೆ ಮಕ್ಕಳು ಬಾಳಬೇಕಾಯಿತು' ಎಂದು ಖಿನ್ನರಾದರು.

ವಿಶ್ವವಿದ್ಯಾಲಯದಲ್ಲಿ ಶೈವ ಮತ್ತು ಸೂಫಿ ವಿಚಾರಗಳನ್ನು ಅಧ್ಯಯನ ಮಾಡಿದ್ದ ಶಾದ್ ರಂಜಾನ್ ಬಹಳ ವಿವರವಾಗಿ ಮಾತನಾಡಿದರು. ವಿಶ್ವವಿದ್ಯಾಲಯದ ಸಿಬ್ಬಂದಿಯೆಲ್ಲರೂ ನಾವು ಭಾರತವನ್ನು ಪ್ರೀತಿಸುತ್ತೇವೆ ಎಂದು ಹೇಳಿದರೂ ಕೆಲವೆಡೆ ಉದ್ಯೋಗದ ಅನಿವಾರ್ಯತೆ ಕಾಣುತ್ತಿತ್ತು. ಆದರೆ ಶಾದ್ ರಂಜಾನ್ ಶೈವ ಪರಂಪರೆ, ಆಗಮಶಾಸ್ತ್ರ, ಸೂಫಿ ಪರಂಪರೆಯ ಬಗ್ಗೆ ವಿವರಿಸಿದರು. ಭಾರತದಲ್ಲಿ ಜೀವನಾನ್ವೇಷಣೆಗೆ ಪೂರಕವಾಗಿ ತತ್ವಶಾಸ್ತ್ರ ಅತ್ಯಂತ ವಿಕಾಸವಾಗಿದೆ ಎಂದು ವಿವರಿಸಿದರು. ಫಾರ್ಸಿ, ಉರ್ದು, ಕಶ್ಮೀರಿಯನ್ನು ಬಲ್ಲವರಾದ್ದರಿಂದ ತುಲನಾತ್ಮಕ ನೋಟ ಅವರಲ್ಲಿತ್ತು. 'ನಾಸ್ತಿಕವಾದದ ಬಗ್ಗೆ, ಆಸ್ತಿಕವಾದದಲ್ಲಿ ಏಳುವ ಪ್ರಶ್ನೆಗಳ ಬಗ್ಗೆ ನಿಮ್ಮಲ್ಲಿ ಮುಕ್ತವಾಗಿ ಮಾತನಾಡಬಹುದು, ನಾನು ಚಿಕ್ಕಂದಿನಲ್ಲಿರುವಾಗ ಕಾಶ್ಮೀರದಲ್ಲಿಯೂ ಅಂತಹ ಚರ್ಚೆ ನಡೆಯುತ್ತಿತ್ತು. ಪಂಡಿತರು ಹೋದ ಬಳಿಕ ಅಂತಹ ಚರ್ಚೆಗಳೇ ಇಲ್ಲವಾಗಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ಲಡಾಕ್‌ಗೆ ತೆರಳುವ ಮಾರ್ಗ ಮುಚ್ಚಿದ್ದರಿಂದ ನಾನು ಕಾಶ್ಮೀರದಲ್ಲಿ ಭೇಟಿಗೆ ಸಿಕ್ಕ ಲೇಖಕ ಇಸ್ಫಂದ್ಯಾರ್ ಖಾನ್ ಅವರೊಡನೆ ಮಾತನಾಡಿದೆ. 'ಭಾರತವು ನೀಡುವ ಎಲ್ಲ ಅನುದಾನವನ್ನು ಈ ಕಶ್ಮೀರಿಗಳೇ ಬಳಸಿಕೊಳ್ಳುತ್ತಾರೆ. ಲಡಾಕ್‌ನಲ್ಲಿ ಒಂದೊಳ್ಳೆ ಸಂಸ್ಥೆಯೇ ಇಲ್ಲ ಗೊತ್ತಾ' ಎಂದು ಮಾತಿನ ಮಧ್ಯೆ ಬಾಯಿತಪ್ಪಿ ದಂತೆ ಹೇಳಿಕೊಂಡರು.

ರಾಣಾಪ್ರತಾಪ್ ಸಿಂಗ್ ಮ್ಯೂಸಿಯಂನಲ್ಲಿ



### ವೈಷ್ಣೋದೇವಿಯ ಸೃಷ್ಟಿವಿಲಾಸ

'ಮಾತಾ ರಾಣಿ', 'ತ್ರಿಕೂಟ' 'ವೈಷ್ಣವಿ' ಎಂಬ ಹೆಸರುಗಳಿಂದಲೂ ಗುರ್ತಿಸಲಾಗುವ ವೈಷ್ಣೋ ದೇವಿ ಗಿರಿಶಿಖರಗಳ ನಡುವಿನ ದೈವೀತಾಣ. ಮಾತೆ ಆದಿಶಕ್ತಿಯ ನಿವಾಸವೆಂಬುದು ನಂಬಿಕೆ. ಆದಿಶಕ್ತಿಯ ದೈವೀಭಾವವನ್ನು ಕಣ್ತುಂಬಿಕೊಳ್ಳಲಿಕ್ಕೆ ಇಲ್ಲಿನ ದೇವಾಲಯಕ್ಕೇ ಹೋಗಬೇಕೆಂದಿಲ್ಲ, ಸುತ್ತಲಿನ ನಿಸರ್ಗದ ರಮಣೀಯತೆಯನ್ನೂ ಕಂಡೂ ಮನಸ್ಸು ಸೃಷ್ಟಿಶಕ್ತಿಗೆ ಶರಣು ಶರಣೆನ್ನುತ್ತದೆ.